**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ದೇವದುರ್ಗ ನ್ಯಾಯಾಲಯ, ದೇವದುರ್ಗ.**

**ಸಿ.ಸಿ ನಂ.492/2023**

ಪಿರ್ಯಾದಿದಾರರು : ಗಬ್ಬೂರು ಪೋಲಿಸ್ ಠಾಣೆ,
ಗಬ್ಬೂರು.

**ವಿರುದ್ಧ**

ಆರೋಪಿ: 1. ರಮೇಶ ತಂದೆ ಹನುಮಂತ, ವಯಸ್ಸುಃ 42 ವರ್ಷ,
ಉಃ ಕೂಲಿ, ಸಾಃ ಮುಷ್ಟೂರು, ತಾಃ ದೇವದುರ್ಗ.

**ಭಾರತ ದಂಡ ಸಂಹಿತೆ ಕಲಂ 313 ರ ರಿತ್ಯಾ ಆರೋಪಿಗಳ ಹೇಳಿಕೆಗಳು**

ಪ್ರಶ್ನೆ-1) ನ್ಯಾಯಾಲಯದಲ್ಲಿ ಅಭಿಯೋಜನೆಯ ಪರ ನೀಡಿದ ಸಾಕ್ಷಿದಾರರ ಸಾಕ್ಷ್ಯವನ್ನು ಕೇಳಿಕೊಂಡಿದ್ದಿರಾ ?

ಉತ್ತರಃ

ಪ್ರಶ್ನೆ-2) ಪ್ರಾಸಾ-2 ರಂಗನಾಥ ತಂದೆ ದಂಡಪ್ಪ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 22-06-2023 ರಂದು ಮಧ್ಯಾಹ್ನ 2-00 ಗಂಟೆಗೆ ದೇವೆಂದ್ರ ಮತ್ತು ನಾನು ಠಾಣೆಯಲ್ಲಿದ್ದಾಗ ಸಣ್ಣ ಈರೇಶ ಪಿಎಸ್ಐ ರವರು ನಮ್ಮನ್ನು ಕರೆದು ಹೆಗ್ಗಡದಿನ್ನಿ ಗ್ರಾಮದ ಅಗಸಿಯ ಹತ್ತಿರ ಮಟಕಾ ಜುಜಾಟದಲ್ಲಿ ತೊಡಗಿದ್ದರ ಕುರಿತು ಖಚಿತ ಮಾಹಿತಿ ಬಂದಿದ್ದು ದಾಳಿ ಕುರಿತು ತಿಳಿಸಿರುತ್ತಾರೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-3) ಪ್ರಾಸಾ-2 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ, ಪಂಚರಾದ ರವಿಂದ್ರ ಮತ್ತು ಬೂದೆಪ್ಪ ರವರನ್ನು ಕರೆದುಕೊಂಡು ಇಲಾಖಾ ಜೀಪಿನಲ್ಲಿ ಠಾಣೆಯಿಂದ ಹೊರಟು ಹೆಗ್ಗಡದಿನ್ನಿ ಗ್ರಾಮದ ಅಗಸಿಯ ಹತ್ತಿರ ಹೋಗಿದ್ದು ನೋಡಲಾಗಿ ಒಬ್ಬ ವ್ಯಕ್ತಿ ಅದೃಷ್ಟದ ನಂಬರ ಬಂದರೆ 1 ರೂ.ಗೆ 80 ರೂ. ಕೊಡುವುದಾಗಿ ಹೇಳಿ ಜನರಿಂದ

ಹಣ ಪಡೆದು ಚೀಟಿಯಲ್ಲಿ ನಂಬರನ್ನು ಬರೆದಕೊಳ್ಳುತ್ತಿದ್ದನು ಎಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-4) ಫ್ರಾಸಾ-2 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ, ದಾಳಿ ಮಾಡಿ ಸದರಿ ವ್ಯಕ್ತಿಯನ್ನು ಹಿಡಿದುಕೊಂಡಿದ್ದು ಜನರು ಓಡಿ ಹೋಗಿದ್ದು ಹಿಡಿದುಕೊಂಡ ವ್ಯಕ್ತಿಯ ಹೆಸರು ಕೇಳಲಾಗಿ ರಮೇಶ ತಂದೆ ಹನುಮಂತ, ಸಾಕೀನ್ ಮುಷ್ಟೂರು ಎಂದು ಹೇಳಿರುತ್ತಾನೆ. ಸಣ್ಣ ಈರೇಶ ರವರು ಸದರಿ ವ್ಯಕ್ತಿಯ ಅಂಗಶೋಧನೆ ಮಾಡಲಾಗಿ ಆತನಿಂದ ಒಂದು ಮಟಕಾ ಚೀಟಿ, ಬಾಲ ಪೆನ್ನು ವತ್ತು 1,020/- ಹಣ ಇದ್ದು ಅದನ್ನು ಅಮಾನತುಪಡಿಸಿಕೊಂಡು ಆತನನ್ನು ಠಾಣೆಗೆ ಕರೆದುಕೊಂಡು ಬಂದಿರುತ್ತೆವೆ ಎಂದು ನಿಮ್ಮ ವಿರುದ್ದ ಸಾಕ್ಷ್ಯನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-5) ಫ್ರಾಸಾ-2 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ, ಆ ಕುರಿತು ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಅಮಾನತುಪಡಿಸಿಕೊಂಡ ಒಂದು ಮಟಕಾ ಚೀಟಿ, ಬಾಲ ಪೆನ್ನು ಮತ್ತು ಹಣವನ್ನು ನೋಡಿದರೆ ಗುರುತಿಸುತ್ತೇನೆ ಎಂದು ನುಡಿಯುತ್ತಾರೆ ಎಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-6) ಫ್ರಾಸಾ-3 ಸಣ್ಣ ಈರೇಶ ತಂದೆ ಚಂದಪ್ಪ ಇವರು ತಮ್ಮ ಸಾಕ್ಷಿಯಲ್ಲಿ ದಿನಾಂಕ 22-06-2023 ರಂದು ಸಂಜೆ 4-00 ಗಂಟೆಗೆ ಮುಷ್ಟೂರು ಗ್ರಾಮದ ಬಸ್ ನಿಲ್ದಾಣದ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ಮಟಕಾ ಜೂಜಾಟದಲ್ಲಿ ತೊಡಗಿದ ಬಗ್ಗೆ ಖಚಿತ ಮಾಹಿತಿ ಬಂದಿರುತ್ತದೆ ಎಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-7) ಫ್ರಾಸಾ-3 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ, ತಕ್ಷಣ ಠಾಣೆಗೆ ರವೀಂದ್ರ ಮತ್ತು ಬೂದೆಪ್ಪ ಪಂಚರವರನ್ನು ಬರಮಾಡಿಕೊಂಡು ಸಿಬ್ಬಂದಿಗಳಾದ ದೇವಿಂದ್ರ ಮತ್ತು ರಂಗನಾಥ ರವರು ಕೂಡಿಕೊಂಡು ಸ್ಥಳಕ್ಕೆ ಹೋಗಿ ಗ್ರಾಮದ ಹೊರವಲಯದ ಮರೆಯಲ್ಲಿ ಜೀಪನ್ನು ನಿಲ್ಲಿಸಿ ಸ್ವಲ್ಪ ದೂರ ನಡೆದುಕೊಂಡು ಹೋಗಿ 4-45 ಗಂಟೆಗೆ ಬಸ್ ನಿಲ್ದಾಣದ ಹತ್ತಿರ ಮರೆಯಲ್ಲಿ ನಿಂತು ನೋಡಲಾಗಿ ಒಬ್ಬ ವ್ಯಕ್ತಿ ಹೋಗಿ ಬರುವ ಜನರಿಗೆ ಕಲ್ಯಾಣಿ ಎಂಬ ನಸೀಬಿನ ಜೂಜಾಟದ ಕುರಿತು 1 ರೂಪಾಯಿ ಕಟ್ಟಿದ್ದರೆ 80 ರೂಪಾಯಿ ಕೊಡುವುದಾಗಿ ಕೂಗುತ್ತಿದ್ದನು ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-8) ಫ್ರಾಸಾ-3 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ, ಆಗ ತಕ್ಷಣ ದಾಳಿ ಮಾಡಿದ್ದು, ನಂಬರ ಬರೆಸುತ್ತಿದ್ದ ಜನರು ಓಡಿ ಹೋಗಿದ್ದು, ನಂಬರ ಬರೆದುಕೊಳ್ಳುತ್ತಿದ್ದ ವ್ಯಕ್ತಿ ಸಿಕ್ಕಿಬಿದ್ದಿದ್ದು ಆತನನ್ನು ವಿಚಾರಿಸಲಾಗಿ ಆತನ ಹೆಸರು ರಮೇಶ ತಂದೆ ಹನುಮಂತ ಎಂದು ತಿಳಿಸಿದ್ದು ಪಂಚರ ಸಮಕ್ಷಮ ಆತನ ಅಂಗ ಶೋದನೆ ಮಾಡಲಾಗಿ ಆತನ ಬಳಿಯಿಂದ ಒಂದು ಚೀಟಿ, ಒಂದು ಬಾಲ ಪೆನ್ನು ಹಾಗೂ ಮಟಕಾ ಜೂಜಾಟದ ಹಣ 1,020/- ರೂಪಾಯಿ ಅಮಾನತುಪಡಿಸಿಕೊಂಡಿದ್ದು ಜೂಜಾಟದ ಹಣವನ್ನು ತಾನೇ ಇಟ್ಟುಕೊಂಡಿರುವುದಾಗಿ ಹೇಳಿರುತ್ತಾನೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-9) ಫ್ರಾಸಾ-3 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ, ಸ್ಥಳದಲ್ಲಿ ಪಂಚನಾಮೆಯನ್ನು ಸಂಜೆ 4-45 ರಿಂದ 5-45 ಗಂಟೆಯವರೆಗೆ ಮಾಡಿರುತ್ತೇನೆ. ನಂತರ ಆರೋಪಿ, ಪಂಚನಾಮೆ ಮತ್ತು ಅಮಾನತುಪಡಿಸಿಕೊಂಡ ವಸ್ತುಗಳ ಜೊತೆಗೆ ಠಾಣೆಗೆ ಹಾಜರಾಗಿ 6-45 ಗಂಟೆಗೆ ದೂರನ್ನು ಜ್ಞಾಪನಾ ಪತ್ರದ ಮೂಲಕ ಠಾಣಾಧಿಕಾರಿಗೆ ನೀಡಿದ್ದು

ಪ್ರಕರಣ ದಾಖಲಿಸುವಂತೆ ನಿರ್ದೇಶನ ನೀಡಿರುತ್ತೇನೆ ಎಂದು ಬಾತ್ಮಿ ಬಂದಿರುತ್ತದೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-10) ಫ್ರಾಸಾ-4 ಬಸವರಾಜ ತಂದೆ ಅಮರಪ್ಪ ಇವರು ತಮ್ಮ ಸಾಕ್ಷಿಯಲ್ಲಿ ದಿನಾಂಕ 22-06-2023 ರಂದು ಸಂಜೆ 06.45 ಗಂಟೆಗೆ ಠಾಣಾ ಪ್ರಭಾರದಲ್ಲಿ ಇದ್ದಾಗ ಸಣ್ಣ ಈರೇಶ ಜ್ಞಾಪನ ಪತ್ರ ಮತ್ತು ದಾಳಿ ಪಂಚನಾಮೆ, ಮುಮಾ ಮತ್ತು ಆರೋಪಿಯನ್ನು ಹಾಜರು ಮಾಡಿದ ಮೇರೆಗೆ ಸದರಿ ಪ್ರಕರಣ ಅಸಂಜ್ಞೆ ಪ್ರಕರಣ ಆಗಿದ್ದರಿಂದ ಎನ.ಸಿ ನಂ.30/2023 ರಲ್ಲಿ ಪ್ರಕರಣ ದಾಖಲು ಮಾಡಿಕೊಂಡಿರುತ್ತೇನೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ?

ಉತ್ತರಃ

ಪ್ರಶ್ನೆ-11) ಫ್ರಾಸಾ-4 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ ನ್ಯಾಯಾಲಯದ ಪರವಾನಿಗೆಯನ್ನು ಮರುದಿನ ಪಡೆದು ದಿನಾಂಕ 23.06.2023 ರಂದು ಬೆಳಿಗ್ಗೆ 09.30 ಗಂಟೆಗೆ ಠಾಣ ಗುನ್ನ ನಂ.82/2023 ರಲ್ಲಿ ಗುನ್ನ ದಾಖಲು ಮಾಡಿಕೊಂಡು ಪ್ರ.ವ ವರದಿ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೆನೆ. ಅದೇ ದಿನ ದೇವಿಂದ್ರ ಮತ್ತು ರಂಗನಾಥ ರವರ ಹೇಳಿಕೆಗಳನ್ನು ಪಡೆದಿರುತ್ತೇನೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ?

ಉತ್ತರಃ

ಪ್ರಶ್ನೆ-12) ಫ್ರಾಸಾ-4 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ ಮುಮಾವನ್ನು ಮಾಲುಪಟ್ಟಿ ನಂ.56/2023 ರಲ್ಲಿ ದಾಖಲು ಮಾಡಿಕೊಂಡು ಮಾನ್ಯ ನ್ಯಾಯಾಲಯಕ್ಕೆ ವರದಿ ನೀಡಿರುತ್ತೇನೆ. ಆರೋಪಿಯನ್ನು ಠಾಣ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಆರೋಪಿ ವಿರುದ್ಧ ಆರೋಪ ಸಾಭಿತಾಗಿದ್ದರಿಂದ ಅಂತಿಮ ವರದಿ

ಸಲ್ಲಿಸಿರುತ್ತೇನೆ ಎಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ?

ಉತ್ತರಃ

ಪ್ರಶ್ನೆ-13) ನೀವು ಏನಾದರೂ ಹೇಳುವುದಕ್ಕೆ ಬಯಸುತ್ತೀರಾ?

ಉತ್ತರಃ

ಪ್ರಶ್ನೆ-14) ನೀರು ಸಾಕ್ಷಿ ವಿಚಾರಣೆ ಮಾಡಲು ಬಯಸುತ್ತೀರಾ?

ಉತ್ತರಃ

(ಆರೋಪಿಯ ಹೇಳಿಕೆಯನ್ನು ಸ್ವತಃ ನಾನೆ ನನ್ನ ಸಮಕ್ಷಮ ಪಡೆದಿದ್ದು, ಅವರು ನುಡಿದಿದ್ದನ್ನು ಕೇಳಿಸಿಕೊಂಡು ಅವರು ಹೇಳಿದ್ದನ್ನು ನಮೂದಿಸಿರುತ್ತೇನೆಂದು ದೃಢಿಕರಿಸಿರುತ್ತೇನೆ).

ದಿನಾಂಕಃ 10-07-2026 ಹಿರಿಯ ಸಿವಿಲ್ ನ್ಯಾಯಾಧೀಶರು
ಸ್ಥಳಃ ದೇವದುರ್ಗ. ಮತ್ತು ಜೆ.ಎಂ.ಎಫ್.ಸಿ., ದೇವದುರ್ಗ.